(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ದಿನಾಂಕ: 15.07.2015ರ ಹದಿಮೂರನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 226 ಪ್ರಶ್ನೆಗಳ ಪೈಕಿ 85 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಗಿದೆ. ಈಗ ಒಂದು ಪ್ರಕಟಣೆ ಇದೆ, ಒಳ್ಳೆಯ ಪ್ರಕಟಣೆ.

(ಅನುಬಂಧ–1)

ಪ್ರಕಟಣೆ

ಮಾನ್ಯ ಇಂಧನ ಸಚಿವರಾದ ಡಿ.ಕೆ. ಶಿವಕುಮಾರ್ ರವರು ಈ ದಿನ ಮಧ್ಯಾಹ್ನ ಒಂದು ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಔತಣಕೂಟವನ್ನು ಏರ್ಪಡಿಸಿರುತ್ತಾರೆ, ತಾವೆಲ್ಲರೂ ಔತಣಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

ಈಗ ಶೂನ್ಯವೇಳೆ ಪ್ರಸ್ತಾಪಗಳು. ಶ್ರೀ ಆರ್.ವಿ. ದೇವರಾಜ್ ಕೇಳಿ. ಸಂಬಂಧಪಟ್ಟ ಮಂತ್ರಿಗಳು ಬಂದಿಲ್ಲವಲ್ಲ.

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ವಿಷಯ: ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿನ ಕಲಾಸಿಪಾಳ್ಯದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ

ಶ್ರೀ ಆರ್.ವಿ. ದೇವರಾಜ್: ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಬಂದಿಲ್ಲ, ಉತ್ತರ ಕೂಡ ಕೊಟ್ಟಿಲ್ಲ.

ಅಧ್ಯಕ್ಷರು: ಉತ್ತರ ಕೊಟ್ಟಿಲ್ಲವೇ? ಅವರಿಗೆ ಏನು ತೊಂದರೆಯಾಗಿದೆಯೇ? ನಿನ್ನೆ ಊಟ ಹಾಕಿಸಿದರು.

ಶ್ರೀ ಆರ್.ವಿ. ದೇವರಾಜ್: ಊಟ ತಿಂದು ಏನೋ ತೊಂದರೆಯಾಗಿರಬೇಕು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇನ್ನೆರಡು ದಿವಸದಲ್ಲಿ ಖಂಡಿತ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು: ಆಯಿತು.

ಶ್ರೀ ಆರ್.ವಿ. ದೇವರಾಜ್ ಅಲ್ಲಿ ಬಸ್‌ಸ್ಟ್ಯಾಂಡ್ ಬಹಳ ಮುಖ್ಯ.

ಅಧ್ಯಕ್ಷರು: ಆಯಿತು, ಎರಡು ದಿವಸದಲ್ಲಿ ಕೊಡಿಸುತ್ತಾರೆ. ಇದು held over ಆಯಿತು. ಶ್ರೀ ಹೆಚ್.ಎಸ್. ಪ್ರಕಾಶ್ ಕೇಳಿ. ಅವರು ಇಲ್ಲ. ಶ್ರೀ ಕೆ.ಎಂ. ಶಿವಲಿಂಗೇಗೌಡರು ಕೇಳಿ.

2) **ವಿಷಯ:** ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯ ಪೊಲೀಸ್ ಠಾಣೆಗೆ ಕಲ್ಲುತೂರಾಟ ನಡೆಸಿ ಜಖಂಗೊಳಿಸುವುದಾಗಿ ಗಾಳಿಸುದ್ದಿ ಹಬ್ಬಿಸಿದ್ದು, ಈ ಗಾಳಿಸುದ್ದಿಗೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಇನ್ನೂ ಉತ್ತರ ಬಂದಿಲ್ಲ. ಈ Question star ಆಗುವುದಿಲ್ಲ. 80 ಪ್ರಶ್ನೆ ಹಾಕಿದರೂ ಒಂದು ಪ್ರಶ್ನೆ ಕೂಡ Starred Question ಇಲ್ಲ. ಈ ರೀತಿಯಲ್ಲಿ ಕೇಳಿ ಸ್ವಲ್ಪ ವಿಷಯವನ್ನು ತೆಗೆದುಕೊಳ್ಳೋಣ ಎಂದರೆ ಉತ್ತರ ಬಂದಿಲ್ಲ.

ಅಧ್ಯಕ್ಷರು: ಇದಕ್ಕೂ ಉತ್ತರ ಬಂದಿಲ್ಲ. ಇಲ್ಲದಿದ್ದರೆ ಇದಕ್ಕೆ ಉತ್ತರವನ್ನು ಒಂದೆರಡು ದಿವಸದಲ್ಲಿ ತರಿಸಿಬಿಡುತ್ತೇನೆ. ಶ್ರೀ ಎನ್.ಹೆಚ್. ಕೋನರೆಡ್ಡಿ ಕೇಳಿ.

3) **ವಿಷಯ:** ಪ್ಯಾಕೇಜ್ ಟೆಂಡರ್ ಪದ್ಧತಿಯನ್ನು ರದ್ದುಪಡಿಸಿ ಒಂದು ಕಾಮಗಾರಿ ಅಂದಾಜು ಪಟ್ಟಿಗೆ ಅನುಗುಣವಾಗಿ ಕೆ.ಟಿ.ಟಿ.ಪಿ ನಿಯಮಗಳನ್ವಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ.